# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಬಿ.ಶಿವಬಸಪ್ಪ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಾಳಗಿ ಇವರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸುವ ಬಗ್ಗೆ - ಆದೇಶ

ಓದಲಾಗಿದೆ:-

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. Compt/ Uplok/ GLB-8837 /2016 /DRE-3 ದಿನಾಂಕ. 04.02.2017.

2) ಮಾನ್ಯ ಉಪ ಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ Compt/ Uplok/ GLB-8837 /2016 /DRE-3 ದಿನಾಂಕ. 01.02.2017

## ಪ್ರಸ್ತಾವನೆ

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 04.02.2017ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-1 ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-1 ರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಸತೀಶ ಕುಮಾರ ತಂದೆ ರಾಜು, ಸಾ// ತೊನಸನಹಳ್ಳಿ(ಎಸ್), ಚಿತ್ತಾಪೂರ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರು ಚಿತ್ತಾಪೂರ ತಾಲ್ಲೂಕಿನ ಮಾಡಬೂಳ ಗ್ರಾಮದಲ್ಲಿ ನಿರ್ವಹಿಸಲಾದ ಒಂದೇ ಕಾಮಗಾರಿಗೆ ಹಲವು ಯೋಜನೆಗಳಲ್ಲಿ ಬಿಲ್ಲನ್ನು ಪಾವತಿಸಿರುತ್ತಾರೆಂದು, ನಿರ್ವಹಿಸಲಾದ ಕಾಮಗಾರಿಗಳು ತೀರಾ ಕಳಪೆ ಮಟ್ಟದ್ದಾಗಿರುತ್ತವೆಂದು, ಕೆಲವೊಂದು ಕಾಮಗಾರಿಯನ್ನು ನಿರ್ವಹಿಸದೇ ಗ್ರಾಮ ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರುಗಳ ಜೊತೆಗೂಡಿ ಈ ಕೆಳಕಂಡವರು ಸರ್ಕಾರದ ಹಣವನ್ನು ದುರಪಯೋಗಪಡಿಸಿಕೊಂಡಿರುತ್ತಾರೆಂದು ಆದ ಕಾರಣ ಸದರಿಯವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ:-

1. ಶ್ರೀ ಶಿವಬಸಪ್ಪ ಕಾಳಶೆಟ್ಟಿ, ಕಿರಿಯ ಇಂಜಿನಿಯರ್/ಶಾಖಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಬುರಗಿ.

2. ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್/ ಶಾಖಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಾಳಗಿ.

ಸದರಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯು ಇಬ್ಬರು ಆಪಾದಿತರಿಂದ ಆಕ್ಷೇಪಣೆಗಳನ್ನು ಪಡೆದುಕೊಂಡಿದ್ದು, ಶ್ರೀ ಶಿವಬಸಪ್ಪ ಕಾಳಶೆಟ್ಟಿ ಇವರು ದಿನಾಂಕ 26.11.2016ರಂದು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ತಾವು ದಿನಾಂಕ 05.06.2006 ರಿಂದ 19.03.2015ರ ವರೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವುದಾಗಿಯೂ ಹಾಗೂ ಈ ಅವಧಿಯಲ್ಲಿ ಕೇವಲ ವಿಭಾಗ ಕಚೇರಿಯ ಕೆಲಸ ಮಾತ್ರ ನಿರ್ವಹಿಸಿರುವುದಾಗಿಯೂ ಈ ಪ್ರಕರಣದಲ್ಲಿರುವ ಕಾಮಗಾರಿಗಳು ಉಪವಿಭಾಗಕ್ಕೆ ಸಂಬಂಧಪಟ್ಟಿರುವುದರಿಂದ ಸದರಿ ಕಾಮಗಾರಿಗಳಿಗೂ ಹಾಗೂ ತಮಗೂ ಯಾವುದೇ ಸಂಬಂಧವಿರುವುದಿಲ್ಲವೆಂದು ಆದ ಕಾರಣ ಸದರಿ ಪ್ರಕರಣದಿಂದ ತಮ್ಮನ್ನು ಕೈ ಬಿಡುವಂತೆ ಕೋರಿರುತ್ತಾರೆಂದು ಹಾಗೂ ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್ ಇವರು ದಿನಾಂಕ 30.11.2016ರಂದು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು 13ನೇ ಹಣಕಾಸು ಯೋಜನೆಯಡಿ ಗ್ರಾಮ ಪಂಚಾಯತಿಗೆ ಬಿಡುಗಡೆಯಾದ ಅನುದಾನದಡಿ ಅಂದಾಜು ಪತ್ರಿಕೆಯಲ್ಲಿ ಅನುಮೋದಿಸಿರುವಂತೆ 2013-14ನೇ ಸಾಲಿನಲ್ಲಿ ಕೈಗೊಳ್ಳಲಾಗಿದೆ ಎಂದು ಇನ್ನುಳಿದ ಆಪಾದನೆಗಳನ್ನು ಅಲ್ಲಗಳೆಯುತ್ತಾ ತಮ್ಮ ಮೇಲಿನ ಪ್ರಕರಣವನ್ನು ಕೈ ಬಿಡುವಂತೆ ಕೋರಿರುತ್ತಾರೆಂದು ತಿಳಿಸಿರುತ್ತಾರೆ:-

ಅ) ಮಾಡಬೂಳ ಗ್ರಾಮದ ಸಾಮರಾಯ ಮನೆಯಿಂದ ಶಿವಲಿಂಗಪ್ಪಾ ಮನೆ ಯವರೆಗೆ ಸಿ.ಸಿ.ರಸ್ತೆ ಅಂದಾಜು ಮೊತ್ತ ರೂ. 50,000/-ಗಳು.

ಆ) ಮಾಡಬೂಳ ಗ್ರಾಮದ ಸರ್ಕಾರಿ ಶಾಲೆಯವರೆಗೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ ರೂ. 1,00,000/-ಗಳು

ಇ) ಮಾಡಬೂಳ ತಾಂಡಾದಲ್ಲಿ ಅಂಗನವಾಡಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ( ಸದರಿ ಕಾಮಗಾರಿಯ ಹೆಸರನ್ನು ಅಂತರ್ಜಾಲದಲ್ಲಿ ನಮೂದಿಸುವಾಗ ತಪ್ಪಾಗಿ ಅಂಗನವಾಡಿ ಕಟ್ಟಡ ಎಂದು ನಮೂದಾಗಿರುತ್ತದೆ) ಅಂದಾಜು ಮೊತ್ತ ರೂ. 2,00,000/-ಗಳು.

ಲೋಕಾಯುಕ್ತ ಕಚೇರಿಯು ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್ ಇವರು ತಮ್ಮ ಲಿಖಿತ ಹೇಳಿಕೆಯ ಜೊತೆಗೆ ಲಗತ್ತಿಸಿ ಸಲ್ಲಿಸಿರುವ ಮಾಡಬೂಳ ತಾಂಡಾದಲ್ಲಿ ಅಂಗನವಾಡಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿಯ ದಾಖಲೆಗಳನ್ನು ಪರಿಶೀಲಿಸಿದ್ದು, ಸದರಿ ಕಾಮಗಾರಿಯನ್ನು ಅನುಷ್ಠನಾಗೊಳಿಸಲು ಗ್ರಾಮ ಪಂಚಾಯತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿ ರವರು ಹೊರಡಿಸಿರುವ ಆದೇಶದಲ್ಲಿ ಹಾಗೂ ತುಂಡು ಗುತ್ತಿಗೆ ನೀಡಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಹೊರಡಿಸಿರುವ ಆದೇಶದಲ್ಲಿ ದಿನಾಂಕ ಮತ್ತು ಸಂಬಂಧಪಟ್ಟ ಅಧಿಕಾರಿಯ ಸಹಿ ಇರುವುದಿಲ್ಲವೆಂದೂ, ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾದ ಗುತ್ತಿಗೆ ಒಪ್ಪಂದದ ಪತ್ರದಲ್ಲಿ ದಿನಾಂಕ ಮತ್ತು ಗುತ್ತಿಗೆದಾರರ ಸಹಿ ಇರುವುದಿಲ್ಲವೆಂದೂ, ಅಳತೆ ಪುಸ್ತಕದಲ್ಲಿ ಕಾಮಗಾರಿಯ ಅಳತೆಗಳನ್ನು ನಿಯತ ಕಾಲಿಕವಾಗಿ ದಾಖಲಿಸದಿರುವುದು, ಕಾಮಗಾರಿಯನ್ನು ಕೈಗೊಳ್ಳುವ ಮುಂಚೆ ತೆಗೆದುಕೊಂಡಿರುವ ಛಾಯಾಪ್ರತಿಯನ್ನು ಲಗತ್ತಿಸಿರುತ್ತಾರೆ. ಆದರೆ, ಕಾಮಗಾರಿ ನಡೆದ ಸಂದರ್ಭದಲ್ಲಿ ಹಾಗೂ ಪೂರ್ಣಗೊಂಡ ನಂತರದ ಛಾಯಾ ಪ್ರತಿಯನ್ನು ಲಗತ್ತಿಸಿರುವುದಿಲ್ಲವೆಂದೂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ಛಾಯಾಚಿತ್ರಗಳನ್ನು ದೂರುದಾರರು ಒದಗಿಸಿದ್ದು ಸದರಿ ಛಾಯಾಚಿತ್ರಗಳು ಪೈಪ್ ಲೈನ್ ಕಾಮಗಾರಿಗೆ ಸಂಬಂಧಪಟ್ಟಿರುವುದೇ ವಿನಃ ಕಾಂಪೌಂಡ್ ಕಾಮಗಾರಿಗೆ ಸಂಬಂಧಪಟ್ಟಿರುವುದಿಲ್ಲವೆಂದೂ, ಸದರಿ

ಕಾಮಗಾರಿಯನ್ನು ಯಾವ ದಿನಾಂಕದಂದು ಪ್ರಾರಂಭಿಸಿ ಯಾವ ದಿನಾಂಕದಂದು ಪೂರ್ಣಗೊಳಿಸಲಾಯಿತೆಂಬುದರ ಬಗ್ಗೆ ಹಾಗೂ ಯಾವಾಗ ಸದರಿ ಕಾಮಗಾರಿಯ ಅಳತೆಗಳನ್ನು ಪರಿಶೀಲಿಸಿ ದಾಖಲಿಸಲಾಯಿತೆಂಬುದನ್ನು ದಾಖಲಿಸಿರುವುದಿಲ್ಲವೆಂದೂ, ಇನ್ನುಳಿದ ಎರಡು ಕಾಮಗಾರಿಗಳಾದ ಸಾಮರಾಯ ಮನೆಯಿಂದ ಶಿವಲಿಂಗಪ್ಪಾ ಮನೆಯವರೆಗೆ ಸಿ.ಸಿ.ರಸ್ತೆ ಹಾಗೂ ಸರ್ಕಾರಿ ಶಾಲೆಯವರೆಗೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಯಾವಾಗ ಅನುಷ್ಠಾನಗೊಳಿಸಲಾಯಿತೆಂಬುದರ ಬಗ್ಗೆ ಹಾಗೂ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಹಾಗೂ ಅನುಷ್ಠಾನಗೊಳಿಸಿದ ನಂತರ ತೆಗೆದ ಛಾಯಾಚಿತ್ರಗಳು ಇರುವುದಿಲ್ಲವೆಂದೂ ತಿಳಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-1ರವರು ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಶ್ರೀ ಶಿವಬಸಪ್ಪ ಕಾಳಶೆಟ್ಟಿ, ಅಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಕಲಬುರಗಿ ಇವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲದ ಕಾರಣ ಇವರನ್ನು ಈ ಪ್ರಕರಣದಿಂದ ಕೈ ಬಿಡಲಾಗಿದೆಯೆಂದು, ಮತ್ತೊಬ್ಬ ಆಪಾದಿತರಾದ ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕಾಳಗಿ ಇವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆಯೆಂದು, ಹಾಗಾಗಿ ಸದರಿಯವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-1ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕಾಳಗಿ ಇವರು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾಡಬೂಳ ಗ್ರಾಮದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಹಾಗಾಗಿ ಸದರಿಯವರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) (i) (ii) & (iii) ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿ ಹಣ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡುಬರುತ್ತದೆ. ಆದ್ದರಿಂದ, ಸದರಿಯವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ : ಗ್ರಾಅಪ 19 ಇಎನ್‌ಕ್ಯೂ 2017 ಬೆಂಗಳೂರು,</u>**

**<u>ದಿನಾಂಕ.04.03.2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಬಿ. ಶಿವಬಸಪ್ಪ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕಾಳಗಿ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸಿ ಆದೇಶಿಸಿದೆ:-

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

04/03/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ.
7. ಉಪ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸಂಬಂಧಪಟ್ಟ ಆಪಾದಿತ ಅಧಿಕಾರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಮುಖಾಂತರ.
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ&ಸಿ).
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ /ಉಪ.ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
12. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.